ಹೋಗ್ಲಿ ಅಂತ ಸುಮ್ಮನಿದ್ರೆ ಇದ್ಯಾಕೋ ನಿಂದು ಅತಿಯಾಯಿತು. ಇದೇ ಕೊನೆ..." ಎಂದು ಕಟ್ಟಪ್ಪಣೆ ಮಾಡಿದ. ಮೊದಲ ಬಾರಿಗೆ ಅವನಿಗೆ ತನ್ನ ಕುರಿತಾಗಿ ಸಣ್ಣದೊಂದು ಭಯ ಶುರುವಾಗಿದೆ ಎಂದು ಆಕೆಗೆ ಅನ್ನಿಸಿತು. ಆದರೆ ಅವ ಈ ಹಿಂದಿನಂತೆ ತನ್ನನ್ನು ಇನ್ನಿಲ್ಲದವನಂತೆ ಬೈಯದೆ ಹಾಗೆ ಸೋತ ಸೈನಿಕನಂತೆ ಎದ್ದು ಹೋದದ್ದು ಕಂಡು ಅರುಂಧತಿಗೆ ಪಿಚ್ಚೆನಿಸಿತು. ಆ ರಾತ್ರಿ ಅರುಂಧತಿಗೆ ಗಡದ್ದು ಊಟ ಸೇರಿ ಇನ್ನಿಲ್ಲದ ನಿದ್ದೆ ತಾನಾಗಿಯೇ ಒದಗಿ ಬಂತು. ಕನಸಿನ ತುಂಬೆಲ್ಲ ಕತ್ತರಿಸಿದ ರೆಕ್ಕೆಗಳ ತಾನು ಕಟ್ಟಿಕೊಂಡು ಮೇಲೆ ಮೇಲೆ ಹಾರಿದಂತೆ... ಜೊತೆಗೆ ಹನುಮಕ್ಕ ಅವಳ ಮಗಳು ಬಾನಿನಲ್ಲಿ ಸಿಕ್ಕಿದಂತೆ... ಮತ್ತೆ ಮೂವರು ಹದ್ದಿನ ಮೇಲೆರಗಿ ಕೊಂದಂತೆ ಹೀಗೆ...

ಮಧುವಂತಿ ಮತ್ತೆ ಒಬ್ಬಳೇ ಬಂದಳು. "ಎರಡೇ ದಿನಕ್ಕೆ ಹೊರಗೆ ಅವ ಬಂದ, ನನ್ನ ಕಡೆ ಗೌರ್ಮೆಂಟ್ ಲಾಯರ್ ಅವನ ಜಾಮೀನು ಅರ್ಜಿಗೆ ತಕರಾರು ಹಾಕಲೇ ಇಲ್ಲ ಅಕ್ಕ" ತಣ್ಣಗೆ ನುಡಿದು ಕೂತಳು. ಮಣಿವೇಲುವಿನ ಮಾತಿನಿಂದ ಅವ ಹೊರಬರಬಹುದೆಂಬ ಸುಳಿವು ಆಕೆಗೆ ಸಿಕ್ಕಿತ್ತಾದರೂ, ಅದು ಇಷ್ಟು ಬೇಗ ಎಂದು ತಿಳಿದಿರಲಿಲ್ಲ. ಸುಮ್ಮನೆ ಮಧುವಂತಿಯನ್ನೇ ನೋಡಿದಳು. 'ಮುಂದೇನು ಮಾಡಲಿ' ಎಂಬಂತಿತ್ತು ಅವಳ ಭಾವ. ಅರುಂಧತಿಗೆ ಮಣಿವೇಲುವಿನ ಮೇಲೆ ಕೋಪ ಉಕ್ಕಿತ್ತು. ಗೌರ್ಮೆಂಟ್ ಲಾಯರಿಗೆ ಇವ ಒಂದು ಮಾತು ಹೇಳಬಾರದಿತ್ತೇಕೆ ಎನ್ನಿಸಿತು. ಆದರೆ ಅವ ಹೇಳಲಾರ ಎಂತಲೂ ಅನ್ನಿಸಿತು. ಅಷ್ಟಾಗಿಯೂ ಅವನಿಗೆ ಈ ಕೇಸಿನ ಬಗ್ಗೆ ಆಸಕ್ತಿಯೇ ಇಲ್ಲ ಎನ್ನುವುದು ಅವನ ನಡವಳಿಕೆಯಿಂದಲೇ ಸ್ಪಷ್ಟವಾಗಿತ್ತು.

"ಎಷ್ಟು ಆರಾಮದಲ್ಲಿ ತಿರುಗುತ್ತಿದ್ದಾನಕ್ಕ" ಮಧುವಂತಿ ಬಿಕ್ಕಳಿಸಿದಳು. ಅವಳ ಬಿಕ್ಕು ತನ್ನನ್ನು ವಂಚಿಸಿ ಹೋದವನ ಕುರಿತಾದ ಕೊನೆಯ ತರ್ಪಣದಂತಿತ್ತು. "ಮದುವೆಯಾಗ್ತಾನೆ ಅನ್ನೋದನ್ನ ಮರೆತು ಬಿಡು" ಅರುಂಧತಿ ಹೇಳಲೋ ಬೇಡವೋ ಎಂಬಂತೆ ಹೇಳಿದಳು. ಮಧುವಂತಿ ಬಿಕ್ಕುತ್ತಲೇ "ಆ ನಂಬಿಕೆಯೇ ಹೋಯಿತಕ್ಕಾ" ದನಿ ಆಳದಿಂದ ಬಂದಂತಿತ್ತು. ಬಯಸದ ಬದುಕೊಂದನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವ ಮನಃಸ್ಥಿತಿಗೆ ಆಕೆ ಸರಿಯಬೇಕಾದ ಸಂದಿಗ್ಧ ಪರಿಸ್ಥಿತಿ. "ಸಂಜೆ ಬಾ ಏನಾದರೂ ಯೋಚಿಸಿರುತ್ತೇನೆ" ಎಂದಳು. ನಲವತ್ತೈದನೇ ವಯಸ್ಸಿನಲ್ಲಿ ಮಿದುಳು ಪ್ರಥಮ ಬಾರಿಗೆ ಸಣ್ಣಗೆ ಕೆಲಸ ಮಾಡತೊಡಗಿತ್ತು. ಏನಾದರೂ ಮಾಡಲೇಬೇಕೆಂಬ ಹುಕಿ ಎದ್ದಿತ್ತು. ಸಂಜೆ ಕಳೆದು ಬೆಳಗಾದರೂ ಏನೊಂದು ದಾರಿಯೂ ಕಾಣಲಿಲ್ಲ. ಸಾಧ್ಯವಿದ್ದ ಹಾದಿಗಳೆಲ್ಲ ಅರ್ಧಕ್ಕೆ ನಿಲ್ಲತೊಡಗಿದ್ದವು...

ಮೂರು ದಿನಕಳೆದರೂ ಮಧುವಂತಿಯ ಸುದ್ದಿಯಿಲ್ಲ. ಅರುಂಧತಿ ಚಡಪಡಿಸತೊಡಗಿದಳು. ಅವಳಿಗೇ ಏನಾದರೂ ಹೊಳೆಯಲಿ ದೇವರೇ ಎಂದು ಮನಸ್ಸಿನಲ್ಲಿಯೇ ಪ್ರಾರ್ಥಿಸಿ ಆ ಮಗುವಿಗೆ ನೆಮ್ಮದಿ ಕೊಡು ಎಂದು ಕೋರಿದಳು. ಆದರೆ ನಾಲ್ಕನೆ ದಿನ ಸಂಜೆ ಮಧುವಂತಿ ಬರುವಾಗ ಕೊಂಚ ದುಗುಡದಲ್ಲಿಯೇ ಬಂದಳು. ಆದರೆ ಮೊದಲ ದಿನ ಬಂದಾಗಿನ ದುಃಖವಿರಲಿಲ್ಲ. ಹತಾಶೆಯೂ ಇರಲಿಲ್ಲ. ಸಣ್ಣಗಿನ ಕೋಪವಿತ್ತು. "ಅಮ್ಮನನ್ನು ಪೊಲೀಸರು ಎಳೆದುಕೊಂಡು ಹೋಗಿದ್ದರು" ಎಂದಳು. "ಯಾಕೆ ಏನಾಯಿತು ಮತ್ತೆ ಏನಾದ್ರೂ" ಅರುಂಧತಿಗೆ ಅಚ್ಚರಿ ಎನ್ನಿಸಿತು.

"ಇಲ್ಲಕ್ಕ ಅಮ್ಮ ದಂಧೆ ಬಿಟ್ಟು ವರ್ಷ ಆಯ್ತು. ಈಗ ಮನೇಲೇ ಹೊಲಿಗೆ ಕೆಲಸ ಮಾಡ್ತಾಳೆ." "ಮತ್ತೆ..." ಅರುಂಧತಿ ಪ್ರಶ್ನಿಸಿದಳಾದರೂ ಮನಸ್ಸಿನಲ್ಲಿಯೇ ಮಣಿವೇಲುವಿನ ಅನಾಸಕ್ತಿಯ ಕಾರಣ ಹೊಳೆದು ಹೋಗಿತ್ತು. "ಪೊಲೀಸ್ ಸ್ಟೇಷನ್ನಿನ ಮುಂದೆ ಕೂತಿದ್ವಲ್ಲ, ಅದುಕ್ಕೆ ಮುಂಡೆ ಮಕ್ಳು..." ಮಧುವಂತಿ ಬೈದಳು. "ಯಾಕೆ ಹೆಂಗಸರಿಗೆ ಬೈತೀ? ಜೊಲ್ಲು ಸುರ್ಕು ಗಂಡಸಿಗೆ ಹುಟ್ಟಿದವು ಎನ್ನು" ಅರುಂಧತಿ ನಕ್ಕಳು. ಆಕೆಯ ಮಾತು ಕೇಳಿದ್ದೇ ತಡ, ಮಧುವಂತಿಗೂ ವಿಪರೀತ ನಗು ಬಂತು. ಜೋರು